ಮುಗಿಯುತ್ತಲಿವೆ. ನಿಗದಿತ ವಾಹನ ಚಲಿಸಿದ (3,47,000) ಅಂತರ ಸಮೀಪಿಸುತ್ತಲಿವೆ, ಅವುಗಳ ಬದಲಿಗೆ ಹೊಸ ಎಂಟು ಜೀಪುಗಳು ನೀಡಬೇಕಾಗುತ್ತದೆ. ಇದರನ್ವಯ ಎಂಟು ಪೊಲೀಸ್ ಠಾಣೆಗಳಿಗೆ ಹೊಸ ವಾಹನ ನೀಡಬೇಕಾಗುತ್ತದೆ.

ಊ) ಆಧುನೀಕರಣ ಅಡಿಯಲ್ಲಿ ಮುಂಬರುವ ಆರ್ಥಿಕ ವರ್ಷದಲ್ಲಿ ಹೊಸ ವಾಹನ ಖರೀದಿಗಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಊ) 2006–07 ನೇ ಸಾಲಿನಲ್ಲಿ ಒಂದು ಅಂಬಾಸಿಡರ್ ಕಾರು, 4 ಜೀಪುಗಳು ಮತ್ತು ಮೋಟಾರ್ ಸೈಕಲ್‌ಗಳನ್ನು ಆಧುನೀಕರಣ ಮತ್ತು 12 ನೇ ಹಣಕಾಸು ಯೋಜನೆಯಡಿಯಲ್ಲಿ ವಾಹನಗಳನ್ನು ಖರೀದಿಸಿ ಬೀದರ್ ಜಿಲ್ಲೆಗೆ ಹಂಚಿಕೆ ಮಾಡಲಾಗಿರುತ್ತದೆ. ಮುಂದಿನ ವಾರ್ಷಿಕ ವರ್ಷ 2007–08 ರಲ್ಲಿಯೂ ಸಹ ಆಧುನೀಕರಣ ಯೋಜನೆಯಡಿಯಲ್ಲಿ ವಾಹನಗಳನ್ನು ಖರೀದಿಸಿ ಅವಶ್ಯಕತೆಗೆ ತಕ್ಕಂತೆ ವಾಹನಗಳನ್ನು ಹಂಚಿಕೆ ಮಾಡಲಾಗುವುದು.

1470 (1821) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಗಳು ಚಾಲನೆಯಲ್ಲಿರುವುವುಗಳೆಷ್ಟು; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಇದಕ್ಕಾಗಿ ಕಳೆದ 3 ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಲಾದ ಹಣವೆಷ್ಟು; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಇ) ಈ ಭಾಗದಲ್ಲಿ ನೀರು ಸರಬರಾಜಿನ ಎಷ್ಟು ಯೋಜನೆಗಳ ಪ್ರಸ್ತಾವನೆಗಳು ಸರ್ಕಾರದ ಮುಂದಿವೆ;

ಈ) ಈ ಯೋಜನೆಗಳಿಗೆ ಪ್ರಸಕ್ತ ಸಾಲಿನಲ್ಲಿ ಮಂಜೂರಾತಿ ನೀಡಲಾಗುವುದೇ (ಪ್ರಸ್ತಾವನೆಗಳ ಪೂರ್ಣ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಒದಗಿಸುವುದು?

ಶ್ರೀ ಹೆಚ್.ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು):

ಅ) ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕಳೆದ ಐದು ವರ್ಷಗಳಿಂದ ಒಟ್ಟು 33 ಕುಡಿಯುವ ನೀರಿನ ಯೋಜನೆಗಳನ್ನು ಚಾಲನೆಗೊಳಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಗಿನಂತಿವೆ.

1. ಗುಲ್ಬರ್ಗಾ ಜಿಲ್ಲೆ – 10 ಪಟ್ಟಣಗಳು :– (ಗುಲ್ಬರ್ಗಾ, ಯಾದಗಿರಿ, ಜೇವರ್ಗಿ, ಶಹಾಪುರ್, ಶೋರಾಪುರ, ಗುರುಮಿಟ್‌ಕಲ್, ಆಳಂದ, ಅಫಜಲ್‌ಪುರ, ಶಹಬಾದ್ ಹಾಗೂ ಚಿತ್ತಾಪೂರ್)

2. ಬೀದರ್ ಜಿಲ್ಲೆ – 6 ಪಟ್ಟಣಗಳು :– (ಬೀದರ್, ಬಸವಕಲ್ಯಾಣ, ಭಾಲ್ಕಿ, ಹುಮ್ನಾಬಾದ್, ಚಿಟಗುಪ್ಪ ಹಾಗೂ ಔರಾದ್)

3. ಬಳ್ಳಾರಿ ಜಿಲ್ಲೆ – 7 ಪಟ್ಟಣಗಳು :– (ಬಳ್ಳಾರಿ, ಹಡಗಲಿ, ಹೊಸಕೋಟೆ, ಕಂಪ್ಲಿ, ಸಿರಗುಪ್ಪ, ತೆಕ್ಕಲಕೋಟೆ, ಹಾಗೂ ಸಂಡೂರು)

4. ಕೊಪ್ಪಳ ಜಿಲ್ಲೆ – 4 ಪಟ್ಟಣಗಳು :– (ಕೊಪ್ಪಳ, ಗಂಗಾವತಿ, ಕುಷ್ಟಗಿ ಹಾಗೂ ಯಲಬುರ್ಗ)

5) ರಾಯಚೂರು ಜಿಲ್ಲೆ – 6 ಪಟ್ಟಣಗಳು :– (ರಾಯಚೂರು, ಸಿಂಧನೂರು, ಮಾನ್ವಿ, ಲಿಂಗಸಗೂರು, ದೇವದುರ್ಗ ಹಾಗೂ ಮುದುಗಲ್)

ಒಟ್ಟು 33 ಪಟ್ಟಣಗಳು.

ಆ) ಕಳೆದ 3 ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಲಾದ ಹಣದ ವಿವರಗಳು ಈ ಕೆಳಕಂಡಂತಿವೆ.

(ಲಕ್ಷ ರೂ. ಗಳಲ್ಲಿ)

	ಜಿಲ್ಲೆ /ನಗರ/ಪಟ್ಟಣ	2003–04	2004–05	2005–06	2006–07	ಒಟ್ಟು
	ಗುಲ್ಬರ್ಗಾ ಜಿಲ್ಲೆ :					
1.	ಗುಲ್ಬರ್ಗಾ ನಗರ	803.64	895.83	1275.70	211.09	3186.26
2.	ಆಳಂದ ಪಟ್ಟಣ	137.93	15.80	–	–	153.73
3.	ಗುರುಮಿಟ್‌ಕಲ್ ಪಟ್ಟಣ	76.31	79.18	13.73	–	169.22
				ಒಟ್ಟು		**3509.21**
	ಬೀದರ್ ಜಿಲ್ಲೆ :					
1.	ಬೀದರ್ ನಗರ	34.366	8.01	1.68	4.06	48.41
2.	ಬಸವಕಲ್ಯಾಣ ಪಟ್ಟಣ	8.67	0.68	–	44.60	53.95
3.	ಭಾಲ್ಕಿ ಪಟ್ಟಣ	1.19	34.89	287.80	104.11	427.99
4.	ಔರಾದ್ ಪಟ್ಟಣ	1.37	84.79	78.87	5.04	170.07
5.	ಹುಮನಾಬಾದ್–ಚಿಟಗುಪ್ಪ	–	3.51	1.14	761.06	765.71
					ಒಟ್ಟು	**1466.13**
	ಬಳ್ಳಾರಿ ಜಿಲ್ಲೆ :					
1.	ಬಳ್ಳಾರಿ ನಗರ	866.24	353.09	939.88	–	2149.21
2.	ಕಂಪ್ಲಿ ಪಟ್ಟಣ	12.28	203.25	19.90	–	235.43
3.	ತೆಕ್ಕಲಕೋಟೆ	30.39	30.30	9.10	–	70.09
					ಒಟ್ಟು	**2454.73**
	ಕೊಪ್ಪಳ ಜಿಲ್ಲೆ :					
1.	ಕೊಪ್ಪಳ ನಗರ	168.19	16.67	15.46	–	200.32
					ಒಟ್ಟು	**200.32**
	ರಾಯಚೂರು ಜಿಲ್ಲೆ :					
1.	ಮುದುಗಲ್ ಪಟ್ಟಣ	–	–	501.98	282.32	784.30
					ಒಟ್ಟು	**784.30**

ಉಳಿದ 20 ನಗರಗಳಲ್ಲಿ ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳಿಗಾಗಿ ಖರ್ಚು ಮಾಡಿರುವುದಿಲ್ಲ.

ಇ) ಒಟ್ಟು 3 ನೀರು ಸರಬರಾಜಿನ ಯೋಜನೆಗಳು ಸರ್ಕಾರದ ಮುಂದಿವೆ.

ಈ) ಉದ್ಭವಿಸುವುದಿಲ್ಲ.

1471 (1822) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೈಸೂರು ನಡುವೆ ನಿರ್ಮಿಸಲಾಗುತ್ತಿರುವ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆ ಯಾವ ಹಂತದಲ್ಲಿದೆ; ಇದುವರೆವಿಗೂ ಎಷ್ಟು ಕಿ.ಮೀ. ರಸ್ತೆ ನಿರ್ಮಾಣವಾಗಿದೆ;

ಆ) ಈ ಯೋಜನೆ ಪೂರ್ಣಗೊಳ್ಳಲು ಇನ್ನೂ ಎಷ್ಟು ಸಮಯಾವಕಾಶದ ಅಗತ್ಯವಿದೆ;

ಇ) ಸರ್ಕಾರದಿಂದ ನೈಸ್ ಸಂಸ್ಥೆಗೆ ಈ ವಿಷಯದಲ್ಲಿ ಯಾವ ಯಾವ ನೆರವನ್ನು ನೀಡಲಾಗುತ್ತಿದೆ;

ಈ) ಈ ಯೋಜನೆಗೆ ಇನ್ನೂ ಅಗತ್ಯವಿರುವ ಭೂಮಿಯನ್ನು ನೀಡುವಂತೆ ಸರ್ವೋಚ್ಚ ನ್ಯಾಯಾಲಯವು ಸೂಚಿಸಿರುವುದು ನಿಜವಲ್ಲವೇ;

ಉ) ನ್ಯಾಯಾಲಯದ ನಿರ್ದೇಶನ ಪ್ರಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಊ) ಈ ವಿಷಯದಲ್ಲಿ ವಿಳಂಬ ಮಾಡಿದಲ್ಲಿ ನ್ಯಾಯಾಂಗ ನಿಂದನೆಯಾಗುವುದಿಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬೆಂಗಳೂರು ಮೈಸೂರು ನಡುವೆ ನಿರ್ಮಿಸಲಾಗುತ್ತಿರುವ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆಯು ಮೊದಲ ಹಂತದ ನಿರ್ಮಾಣದ ಹಂತದಲ್ಲಿದೆ. ಯೋಜನಾ ರಸ್ತೆಗಳ ಕಾಮಗಾರಿ ಕಾರ್ಯ ಪ್ರಗತಿಯಲ್ಲಿದೆ.